C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 256/2019

ಚಾ.ಸಾ.–06 ಪ್ರಾ.ಸಾ.–06

| | |
|---|---|
| ಸಾಕ್ಷಿದಾರರ ಹೆಸರು | ಕೆಂಚಮ್ಮ |
| ಗಂಡನ ಹೆಸರು | ಲೇಟ್ ನಿಂಗಯ್ಯ |
| ವಯಸ್ಸು | 60 ವರ್ಷಗಳು |
| ಉದ್ಯೋಗ | ಕೂಲಿ ಕೆಲಸ |
| ವಾಸ | ಕಿರುಗಾವಲು ಗ್ರಾಮ |

**ದಿನಾಂಕಃ 22.12.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ತಂಗಿಯ ಗಂಡ. ಚಾಸಾ- 2 ಮತ್ತು 3 ಅವರ ಮಕ್ಕಳು. ಚಾಸಾ-4 ನನ್ನ ತಂಗಿ. ಚಾಸಾ- 5 ನನ್ನ ತಂಗಿಯ ನಾದಿನಿ. ಚಾಸಾ- 7 ನನ್ನ ತಾಯಿ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ- 10, 11 ರವರ ಪರಿಚಯ ನನಗೆ ಇದೆ.

2. ಈ ದಿನ ನ್ಯಾಯಾಲಯದ ಮುಂದಿರುವ 1, 3 ರಿಂದ 12 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 and 3 to 12 in the dock). 2ನೇ ಆರೋಪಿಯ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No.2). 4 ಮತ್ತು 11 ನೇ ಆರೋಪಿತರು ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು. 7ನೇ ಆರೋಪಿ ವಿಶ್ವಕರ್ಮ ಜಾತಿಗೆ ಸೇರಿದವರು. ಉಳಿದವರು ಒಕ್ಕಲಿಗ ಜಾತಿಗೆ ಸೇರಿದವರು.

3. ನನ್ನ ತಂಗಿ ಮತ್ತು ಅವರ ಕುಟುಂಬದವರು ಮಂಡ್ಯದ ಗಾಂಧಿನಗರ, 6ನೇ ಕ್ರಾಸ್‌ನಲ್ಲಿ ವಾಸವಿದ್ದಾರೆ. ಚಾಸಾ- 5 ರವರು ನನ್ನ ತಂಗಿ ಮತ್ತು ಕುಟುಂಬದವರು ವಾಸವಿದ್ದ

ಶೆಡ್ಡಿನ ಮಂಭಾಗದ ಶೆಡ್ಡಿನಲ್ಲಿ ವಾಸವಿದ್ದರು. ಸದರಿ ಜಾಗದಲ್ಲಿ ಅವರೆಲ್ಲರು ಸುಮಾರು 70–80 ವರ್ಷಗಳಿಂದ ವಾಸವಿದ್ದರು. ಚಾಸಾ- 5 ರವರು ವಾಸವಿದ್ದ ಶೆಡ್ಡನ್ನು ಮನೆ ಕಟ್ಟುವ ಸಲುವಾಗಿ ಕಿತ್ತು ಹಾಕಿದ್ದರು. ಆ ಸಮಯ ಆರೋಪಿತರು ಸದರಿ ಜಾಗ ಅವರದು ಎಂದು ಬಂದು ಗಲಾಟೆ ಮಾಡಿದರು.

4. ಈಗ್ಗೆ 6 – 7 ವರ್ಷಗಳ ಹಿಂದೆ ನಾನು, ಚಾಸಾ- 1 ರಿಂದ 5, ಚಾಸಾ- 7 ರವರು ಬಾಗಿಲು ನಿಲ್ಲಿಸಿ ಇಟ್ಟಿಗೆ ಕೂರಿಸಿ ಮನೆ ಕಟ್ಟುತ್ತಿದ್ದೆವು. ಆ ಸಮಯ ಚಾಸಾ- 1, 2, 3 , 4 ರವರನ್ನು ಠಾಣೆಗೆ ಕರೆಸಿದರು. ಆ ಕಾರಣ ಅವರು ಠಾಣೆಗೆ ಹೋದರು. ಆ ಸಮಯ ನಾನು, ನನ್ನ ಮಗ, ಗಾರೆ ಕೆಲಸದವರು, ಕೈ ಆಳುಗಳು ಇದ್ದೆವು. ಆ ಸಮಯ ನ್ಯಾಯಾಲಯದ ಮುಂದಿರುವ ಆರೋಪಿತರು ಟ್ರಾಕ್ಟರ್ ನಲ್ಲಿ ಅಲ್ಲಿಗೆ ಬಂದು ಕಟ್ಟಿದ್ದ ಗೋಡೆ ಬಾಗಿಲುಗಳನ್ನು ಅಲ್ಲೆ ಬಿದ್ದಿದ್ದ ಆರೆ ಉಪಯೋಗಿಸಿ ಬೀಳಿಸಿದರು. ಹಿಂಭಾಗದಲ್ಲಿಇದ್ದ ಶೆಡ್ಡನ್ನು ಸಹಾ ಶೆಡ್ಡಿನ ಮೇಲೆ ಹತ್ತಿ ಶೀಟನ್ನೆಲ್ಲಾ ಕಿತ್ತು ಹಾಕಿದರು. ಅದರ ಗೊಡೆಯನ್ನು ಸಹಾ ಆರೆಯಿಂದ ಬೀಳಿಸುತ್ತಿದ್ದರು. ಠಾಣೆಗೆ ಹೋಗಿದ್ದ ನನ್ನ ತಂಗಿ ಮತ್ತು ಕುಟುಂಬದವರಿಗೆ ಫೋನ್ ಮಾಡಿ ಗಾರೆ ಕಟ್ಟುತ್ತಿದ್ದವರು ತಿಳಿಸಿದರು. ಆ ಸಮಯ ಅವರೆಲ್ಲರೂ ಠಾಣೆಯಿಂದ ವಾಪಸ್ಸು ಬಂದರು. ಆ ಸಮಯ ಚಾಸಾ- 5 ರವರನ್ನು ಆರೋಪಿತರು ತುಳಿದರು. ಚಾಸಾ- 2 ರವರಿಗೆ ಹಲ್ಲೆ ಮಾಡಿದರು. ಬೇರೆಯವರಿಗೆ ಅಷ್ಟೇನು ಏಟು ಆಗಿರುವುದಿಲ್ಲ. ನನಗೂ ಪೆಟ್ಟಾಯಿತು. ಪೆಟ್ಟಾಗಿದ್ದವರೆಲ್ಲಾ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡೆವು. ನಂತರ ನನ್ನ ತಂಗಿ ಕಡೆಯವರು ದೂರನ್ನು ಕೊಟ್ಟಳು. ಈ ಮೇಲೆ ಹೇಳಿದ ವಿಚಾರಗಳನ್ನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ.

5. ಈ ಹಿಂದೆ ನಾನು ಮಂಡ್ಯದ ನ್ಯಾಯಾಲಯಕ್ಕೆ ಹೋಗಿ ಹೇಳಿಕೆ ನೀಡಿರುತ್ತೇನೆ ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–13** ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–13ಎ** ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ</u>**

6. ಗಲಾಟೆ ನಡೆದಿದೆ ಎನ್ನುವ ಸಮಯ ನಾನು ಕಿರುಗಾವಲುವಿನಲ್ಲಿ ವಾಸವಿದ್ದೆ. ಗಲಾಟೆನಡೆದಿದೆ ಎನ್ನುವ ಜಾಗ ಚಾಸಾ- 1 ರವರದು ಎಂದು ತೋರಿಸಲು ಯಾವುದೇ ದಾಖಲೆ ಅವರಬಳಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದಿಂದ ಅವರಿಗೆ

ಮನೆ ಸಿಗುತ್ತದೆ ಎಂದು ಹೇಳಿದ ಕಾರಣ ಅವರು ಶೆಡ್ಡು ಕಟ್ಟಿ ವಾಸವಾಗಿದ್ದರು ಎಂದರೆ ಸರಿಯಲ್ಲ.

7. ಸರ್ಕಾರದವರು ಮನೆ ಇಲ್ಲದವರಿಗೆ, ಜಾಗ ಇಲ್ಲದವರಿಗೆ ಮನೆ ಕಟ್ಟಿಕೊಡುತ್ತೇವೆ ಎಂದು ಹೇಳಿದ್ದ ಕಾರಣ ಅಲ್ಲಿ ಎಲ್ಲರು ತಾತ್ಕಾಲಿಕವಾಗಿ ಶೆಡ್ಡು ಹಾಕಿ ವಾಸವಾಗಿದ್ದರು ಎಂದರೆ ಸರಿ. ಈ ಪ್ರಕರಣದ ಗಲಾಟೆ ನಡೆದಿದೆ ಎನ್ನುವ ಸಮಯ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವೆ ಎಂದು ಅವರು ನಮ್ಮ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿ. ಆದಕಾರಣ ನಮ್ಮನ್ನೆಲ್ಲಾ ಪೋಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಪೋಲೀಸ್ ಠಾಣೆಯಲ್ಲಿ ಸದರಿ ಜಾಗಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಕೇಳಿದಾಗ ನಮ್ಮ ಬಳಿ ಯಾವುದೇ ದಾಖಲೆ ಇರಲಿಲ್ಲ ಎಂದರೆ ಸರಿ. ಸದರಿ ಸ್ಥಳ 1ನೇ ಆರೋಪಿಗೆ ಸಂಬಂದಪಟ್ಟಿದ್ದು ಎಂದು ದಾಖಲೆಗಳನ್ನು ಅವರು ತೋರಿಸಿರುತ್ತಾರೆ ಎಂದರೆ ಸರಿ. ಆ ಸಮಯ ಪೋಲೀಸರು ಸದರಿ ಸ್ಥಳ 1ನೇ ಆರೋಪಿಗೆ ಸೇರಿದ್ದು ಅದನ್ನು ಅವರಗೆ ಬಿಟ್ಟುಕೊಡಿ ಎಂದು ತಿಳುವಳಿಕೆ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ.

8. ಹೊಸದಾಗಿ ಮನೆಯನ್ನು ಕಟ್ಟುತ್ತಿರುವಾಗ 1ನೇ ಆರೋಪಿ ಬಂದು ಸದರಿ ಸ್ಥಳ ಅವರದು ಎಂದು ಕೇಳಿದರು. ಆ ಸಮಯ ನಾನು ಮತ್ತು ನಮ್ಮ ಕುಟುಂಬದವರು ಸೇರಿ 1ನೇ ಆರೋಪಿಗೆ ಹೇಳಿದಾಗ ಸದರಿ ಸ್ಥಳ ನಮ್ಮದು ಎಂದು ಅವರ ಮೇಲೆ ಹಲ್ಲೆ ಮಾಡಿದೆವು ಎಂದರೆ ಸರಿಯಲ್ಲ. ಈ ಸಂಬಂದ 1ನೇ ಆರೋಪಿ ನಮ್ಮ ತಂಗಿಯ ಕುಟುಂಬದವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. 1ನೇ ಆರೋಪಿ ಅವರ ವಿರುದ್ಧ ದೂರು ಕೊಟ್ಟಿರುವ ವಿಷಯ ತಿಳಿದು ನನ್ನ ತಂಗಿ ಮತ್ತು ಅವರ ಕುಟುಂಬದವರು ಅವರ ವಿರುದ್ಧ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಅವರು ದೂರು ಕೊಟ್ಟ ನಂತರ ಪ್ರತಿ ದೂರನ್ನು ಸುಳ್ಳಾಗಿ ಆರೋಪಿತರ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಇದ್ದಾಗ ಆರೋಪಿತರು ಯಾರು ಸ್ಥಳಕ್ಕೆ ಬಂದಿರುವುದಿಲ್ಲ, ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ನಮಗೆ ಸೇರಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಪೋಲೀಸರ ಮುಂದೆ ಇಲ್ಲಿಯವರೆಗೂ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾದೀಶರ ಮುಂದೆ ಪೋಲೀಸರು ಹೇಳಿಕೊಟ್ಟಂತೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ</u>** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**